**ಇಂದು ದಿನಾಂಕ 10.10.2022 ರಂದು ಪಿಡಬ್ಲ್ಯೂ-1 ರವರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ.ಡಿ.ಎನ್.ಎನ್. ಪರವಾಗಿ ಶ್ರೀ.ಎಸ್.ಜಿ.ಎಸ್.ವಕೀಲರಿಂದಃ**

ಓ.ಎಸ್.ನಂ.830/2008 ಈ ದಾವೆಯ ಬಗ್ಗೆ ನನ್ನ ವಾದ ಪತ್ರ ಮತ್ತು ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಿರುತ್ತೇನೆ. ನಿಪಿ-151 ರಿಂದ 160 ದಾಖಲೆಗಳನ್ನು ನಮ್ಮ ವಕೀಲರ ಸಲಹೆ ಮೆರೆಗೆ ಪ್ರಸ್ತುತ ದಾವೆಯಲ್ಲಿ ಹಾಜರುಪಡಿಸಿರುತ್ತೇನೆ. ಓ.ಎಸ್.ನಂ.830/2008 ಮತ್ತು ಪ್ರಸ್ತುತ ದಾವೆಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿ. ಪ್ರಸ್ತುತ ದಾವೆಯ ಪ್ರಕ್ರಿಯೆಯನ್ನು ವಿಳಂಬಗೊಳಿಸಲು ಸದರಿ ದಾಖಲೆಗಳನ್ನು ನಾನು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ 13 ರಿಂದ 15 ನೇ ಪ್ರತಿವಾದಿಯರಿಂದಃ**

13 ರಿಂದ 15 ನೇ ಪ್ರತಿವಾದಿಯರನ್ನು ಕೂಗಿಸಲಾಯಿತು, ಹಾಜರಿರುವುದಿಲ್ಲ. ಸದರಿಯವರ ವಕೀಲರು ಕಡತವನ್ನು ಸದರಿ ಪ್ರತಿವಾದಿಯರಿಗೆ ಹಿಂದುರುಗಿಸಿರುವುದಾಗಿ ಮೆಮೋ ಸಲ್ಲಿಸಿರುತ್ತಾರೆ. ಆದ್ದರಿಂದ ಸದರಿ ಪ್ರತಿವಾದಿಯರ ಪರ ಸಾಕ್ಷಿಯ ಪಾಟೀ ಸವಾಲನ್ನು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ**

(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**3 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ,
ಮತ್ತು
C/c.2 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ.,
ದೇವನಹಳ್ಳಿ,**